UNIVERSITY LIBRARY
Agri Newspaper Clippings
Monday 23-03-2026
For more information visit University Library Website
Web - uasbagrilibindia.org
E-mail- librarian@uasbangalore.edu.in

ಸುನಿಲ್ ಪೊನ್ನೇಟಿ ಮಡಿಕೇರಿ

ಕಾಳುಮೆಣಸು ಬೆಳೆ ಸೊಗಸು

ಕೊಡಗಿನಲ್ಲಿ ವರ್ಷದಿಂದ ವರ್ಷಕ್ಕೆ ಬೆಳೆಯುವ ಪ್ರದೇಶ ವಿಸ್ತರಣೆ



ಕೊಡಗಿನಲ್ಲಿ ಸಾಮಾನ್ಯವಾಗಿ ಕಾಫಿ ಜತೆ ಮಿಶ್ರ ಬೆಳೆಯಾಗಿ ಬೆಳೆಯುವ ಕಾಳುಮೆಣಸು ಉತ್ಪಾದನೆ ಈ ಬಾರಿ ಹೆಚ್ಚಾಗುವ ಸಾಧ್ಯತೆ ಇದೆ. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ರಾಜ್ಯ ಸಚಿವ ಜಿತಿನ್ ಪ್ರಸಾದ್ ಈ ಮಾಹಿತಿ ನೀಡಿದ್ದಾರೆ. ಜಿಲ್ಲೆಯಲ್ಲಿ ಕಾಳುಮೆಣಸು ಉಪ ಬೆಳೆಯಾದರೂ ವರ್ಷದಿಂದ ವರ್ಷಕ್ಕೆ ಬೆಳೆಯುವ ಪ್ರದೇಶ ವಿಸ್ತಾರವಾಗುತ್ತಿದೆ. ಸಮರ್ಪಕ ಪೋಷಕಾಂಶ ನಿರ್ವಹಣೆ, ವೈಜ್ಞಾನಿಕ ಕೃಷಿ ಪದ್ಧತಿ ಅನುಸರಣೆ ಮತ್ತಿತರ ಕಾರಣಗಳಿಂದ ಉತ್ಪಾದನೆಯಲ್ಲಿ ಹೆಚ್ಚಳ ಕಂಡುಬರುತ್ತಿದೆ.

ಜಿಲ್ಲೆಯಲ್ಲಿ ಸುಮಾರು 40-50 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಾಳುಮೆಣಸು ಬೆಳೆಯಲಾಗುತ್ತಿದೆ. ಕೊಡಗಿನಲ್ಲಿ ವಾರ್ಷಿಕವಾಗಿ 3,300 ಮೆಟ್ರಿಕ್ ಟನ್ ಉತ್ಪಾದನೆ ಆಗುತ್ತಿದೆ. ರಾಜ್ಯದಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಕಾಳುಮೆಣಸು ಬೆಳೆಯುವ ಹೆಗ್ಗಳಿಕೆಗೆ ಕೊಡಗು ಪಾತ್ರವಾಗಿದೆ. ಒಣಗಿಸಿದ ಕಾಳನ್ನು ಎಷ್ಟು ಸಮಯ ಬೇಕಾದರೂ ಸಂಗ್ರಹಿಸಿ ಇಟ್ಟುಕೊಳ್ಳಬಹುದಾಗಿದೆ. ಹಾಗಾಗಿ, ಇದನ್ನು ಕಪ್ಪು ಬಂಗಾರ ಅಥವಾ ಬೆಳೆಗಾರನ ಎಟಿಎಂ ಎಂದು ಕರೆಯಲಾಗುತ್ತದೆ.

ಕಾಫಿ ದರ ಕುಸಿತ ಸಂದರ್ಭಗಳಲ್ಲಿ ಬೆಳೆಗಾರರನ್ನು ಕಾಪಾಡಿಕೊಂಡು ಬಂದಿದ್ದೇ ಕಾಳುಮೆಣಸು. ಕಾಫಿ ತೋಟ, ಕುಟುಂಬದ ನಿರ್ವಹಣೆಗೆ ಕಾಳು ಮೆಣಸಿನಿಂದ ಬಂದ ಆದಾಯ ಕೈ ಹಿಡಿಯುತ್ತಾ ಬಂದಿದೆ. ಹಾಗಾಗಿಯೇ ಕಾಫಿಯಂತೆ ಕಾಳುಮೆಣಸು ಬೆಳೆಯುವ ಪ್ರದೇಶವನ್ನು ವಿಸ್ತರಿಸಿರುವುದರಿಂದಲೂ ಉತ್ಪಾದನೆ ಪ್ರಮಾಣ ಹೆಚ್ಚಾಗಿದೆ.

ಲೋಕಸಭೆಯಲ್ಲಿ ಪ್ರಸ್ತಾಪ: ಲೋಕಸಭೆಯಲ್ಲಿ ಈಚೆಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೊಡಗಿನಲ್ಲಿ ಕಾಳುಮೆಣಸು ಉತ್ಪಾದನೆಯ ಸ್ಥಿತಿ, ರಫ್ತಿನ ಪರಿಣಾಮ, ರೈತರಿಗೆ ಬೆಂಬಲ ಮತ್ತು ಕನಿಷ್ಠ ಆಮದು ಬೆಲೆಯ ಪರಿಷ್ಕರಣೆ ಬಗ್ಗೆ ಸರ್ಕಾರಕ್ಕೆ ಪ್ರಶ್ನೆ ಕೇಳಿದ್ದರು. ಇದಕ್ಕೆ ಉತ್ತರಿಸಿದ್ದ ಸಚಿವ ಜಿತಿನ್ ಪ್ರಸಾದ್ ಕಳೆದ ವರ್ಷಕ್ಕೆ ಹೋಲಿಸಿದರೆ 2025-26ರಲ್ಲಿ ಉತ್ಪಾದನೆ ಸುಮಾರು ಶೇ.16 ಹೆಚ್ಚಾಗಬಹುದು ಎಂದು ಮಾಹಿತಿ ನೀಡಿದ್ದಾರೆ. ಭಾರತದ ಕಾಳುಮೆಣಸು ರಫ್ತು ಪ್ರಮಾಣ ಶೇ.14.72 ಹೆಚ್ಚಾಗಿ 101.45 ಮಿಲಿಯನ್ ಡಾಲರ್ ತಲುಪಿದೆ ಮತ್ತು ಎಸ್‌ಪಿಐಸಿಐಡಿ ಯೋಜನೆ ಕಾಳುಮೆಣಸು ಬೆಳೆಗಾರರಿಗೆ ಉಪಕರಣಗಳು, ತರಬೇತಿ ಮತ್ತು ಮಾರುಕಟ್ಟೆ ಸಂಪರ್ಕಗಳೊಂದಿಗೆ ಬೆಂಬಲ ನೀಡುತ್ತಿದೆ. ದೇಶೀಯ ರೈತರನ್ನು ರಕ್ಷಿಸಲು ಕಾಳುಮೆಣಸು ಆಮದಿಗೆ ಪ್ರತಿ ಕೆಜಿಗೆ 500 ರೂ. ಕನಿಷ್ಠ ಆಮದು ಬೆಲೆ ಜಾರಿಯಲ್ಲಿದೆ ಎಂದು ಸಚಿವರು ತಿಳಿಸಿರುವುದಾಗಿ ಯದುವೀರ್ ಹೇಳಿದ್ದರು.



ಹವಾಮಾನ ಕಾರಣ

ಕೊಡಗಿನಲ್ಲಿ ಕಾಳುಮೆಣಸು ಉತ್ತಮವಾಗಿ ಬೆಳೆಯಲು ಹವಾಮಾನ ಕಾರಣವಾಗಿದೆ. ಕಾಫಿ ತೋಟಗಳಲ್ಲಿರುವ ಸಿಲ್ವರ್ ಮರ ಅಥವಾ ಇತರ ಕಾಡಿನ ಮರಗಳ ಮೇಲೆ ಮೆಣಸಿನ ಬಳ್ಳಿಗಳನ್ನು ಹಬ್ಬಿಸಲಾಗುತ್ತದೆ. ಆಡಕೆ ಮರಗಳಿಗೂ ಹಬ್ಬಿಸಲಾಗುತ್ತದೆ. ಇಲ್ಲಿ ಬೆಳೆಯುವ ಮೆಣಸು ಗಾತ್ರದಲ್ಲಿ ದೊಡ್ಡದಾಗಿದ್ದು ಉತ್ತಮ ರುಚಿ ಮತ್ತು ಅಧಿಕ ಸಾಂದ್ರತೆಯ ಎಣ್ಣೆ ಅಂಶ ಹೊಂದಿರುವುದರಿಂದ ಸಹಜವಾಗಿ ಉತ್ತಮ ಬೆಲೆ ಹೊಂದಿದೆ.

ಪನ್ನಿಯೂರು-1, ಕರಿಮುಂಡ, ಉದಿರುಕೋಟೆ ಮತ್ತು ಇತ್ತೀಚೆಗೆ ಜನಪ್ರಿಯವಾಗಿರುವ ಸೈಲೆಂಟ್ ವ್ಯಾಲಿ ತಳಿಯ ಕಾಳುಮೆಣಸು ಕೊಡಗಿನಲ್ಲಿ ಹೆಚ್ಚಾಗಿ ಬೆಳೆಸಲಾಗುತ್ತದೆ. ಸಾಮಾನ್ಯವಾಗಿ ಜನವರಿಯಿಂದ ಮಾರ್ಚ್ ಅಂತ್ಯದವರೆಗೆ ಕಾಳುಮೆಣಸಿನ ಕೊಯ್ಲು ನಡೆಯುತ್ತದೆ. ಸೊರಗುರೋಗ ನಿಯಂತ್ರಣ ಕಾಳುಮೆಣಸು ಬೆಳೆಗಾರರ ಪಾಲಿಗೆ ದೊಡ್ಡ ಸವಾಲಾಗಿದೆ. ಭಾರತೀಯ ಸಾಂಬಾರ ಮಂಡಳಿ ಮಾಹಿತಿ ಪ್ರಕಾರ ಮಾ.11ರಂದು ಕಾಳುಮೆಣಸು ಮಾರುಕಟ್ಟೆ ದರ ಕೆಜಿಗೆ 696-716 ರೂ. ತನಕ ಇದೆ.



ಉತ್ತಮ ತಳಿಗಳ ಆಯ್ಕೆ ಮತ್ತು ಸುಧಾರಿತ ಕೃಷಿ ವಿಧಾನಗಳನ್ನು ಬಳಸುವುದು ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತದೆ. ಕೊಡಗಿನಲ್ಲಿ ಕಾಳುಮೆಣಸು ಉತ್ಪಾದನೆ ಪ್ರಮಾಣ ಹೆಚ್ಚಳ ಆಗಲು ಇದೂ ಕಾರಣ ಇರಬಹುದು. ಕೃಷಿಕರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಎಲ್ಲ ರೀತಿಯ ಸಹಕಾರ ನೀಡಲು ಇಲಾಖೆ ಸಿದ್ಧವಾಗಿದೆ.

। ಎಚ್.ಶಶಿಧರ್ ಉಪನಿರ್ದೇಶಕ, ತೋಟಗಾರಿಕೆ ಇಲಾಖೆ, ಕೊಡಗು





ಉತ್ತಮ ಕೃಷಿ ಪದ್ಧತಿ ಅಳವಡಿಕೆ, ಅಧುನಿಕ ತಂತ್ರಜ್ಞಾನಗಳ ಬಳಕೆಯ ಮೂಲಕ ಹೆಚ್ಚಿನ ಉತ್ಪಾದನೆಯ ಗುರಿ ಮುಟ್ಟಬಹುದು. ಕೃಷಿಕರ ಆದಾಯ ಹೆಚ್ಚಳಕ್ಕೂ ಇದು ಸಾಧ್ಯವಾಗಲಿದೆ. ತಜ್ಞರ ಸಲಹೆ, ಮಾರ್ಗದರ್ಶನದೊಂದಿಗೆ ಕೃಷಿಕರು ಸಾಂಬಾರ ಬೆಳೆಗಳನ್ನು ಉತ್ತಮವಾಗಿ ಬೆಳೆಯಬಹುದಾಗಿದೆ.

। ಡಾ.ಬಿ.ಎಸ್.ಚಂದ್ರಶೇಖರ ಜಂಟಿ ನಿರ್ದೇಶಕ, ಕೃಷಿ ಇಲಾಖೆ, ಕೊಡಗು


Bengaluru Edition
Mar 23, 2026 Page No. 6
Powered by: erelego.com

ವಿಜಯವಾಣಿ ನಂ 1

ವಿರೂಪಾಕ್ಷಯ್ಯ ಗುದ್ನಯ್ಯನವರಮಠ ಹುಬ್ಬಳ್ಳಿ

ಬರಡು ಭೂಮಿಯಲ್ಲಿ ಬಂಗಾರದ ಬೇಸಾಯ

80ರ ವಯಸ್ಸಲ್ಲೂ ಬತ್ತದ ಉತ್ಸಾಹ



ಹವಾಮಾನ ಬದಲಾವಣೆ, ಅತಿವೃಷ್ಟಿ, ಅನಾವೃಷ್ಟಿ, ಬೆಲೆ ಕುಸಿತ ಹೀಗೆ...ಅನೇಕ ಸಮಸ್ಯೆಗಳು ಕೃಷಿ ಕ್ಷೇತ್ರವನ್ನು ಕಾಡುತ್ತಿವೆ. ಹೀಗಾಗಿ ಫಲವತ್ತಾದ ಭೂಮಿ ಇದ್ದರೂ ಉತ್ತಮ ಬೆಳೆ ಬೆಳೆಯಲು ರೈತರು ಹರಸಾಹಸಪಡುವಂತಾಗಿದೆ. ಆದರೆ, ಇದಕ್ಕೆ ಅಪವಾದ ಎಂಬಂತೆ ಹುಬ್ಬಳ್ಳಿಯ ಬಂಕಾಪುರ ಚೌಕದ ಪಾಟೀಲ ಗಲ್ಲಿಯ ರಾಜ್ಯಮಟ್ಟದ ಶ್ರೇಷ್ಠ ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ರೈತ ಡಾ.ದ್ಯಾವನಗೌಡ ತಮ್ಮನಗೌಡ ಪಾಟೀಲ 80ನೇ ವಯಸ್ಸಿನಲ್ಲಿಯೂ ಸುತ್ತಲಿನ ರೈತರು ಹುಬ್ಬೇರಿಸುವಂತಹ ಸಾಧನೆ ಮಾಡಿದ್ದಾರೆ. ತಾಲೂಕಿನ ಮಾವಿನಕರ ಗ್ರಾಮದಲ್ಲಿರುವ 14 ಎಕರೆ ಹೊಲವನ್ನು ಸಮತಟ್ಟುಗೊಳಿಸಿ, ಸಾವಯವ ಕೃಷಿ ಪದ್ಧತಿ ಮೂಲಕ ಬಂಗಾರದಂಥ ಬೆಳೆ ಬೆಳೆದಿದ್ದಾರೆ.

2004ರಲ್ಲಿ ಭೂಮಿ ಸಮತಟ್ಟುಗೊಳಿಸುವಾಗ ಅಂದಾಜು 400 ಟ್ರ್ಯಾಕ್ಟರ್‌ಗಳಷ್ಟು ಕಲ್ಲುಗಳನ್ನು ಹೊರತೆಗೆದರು. ಆ ಕಲ್ಲುಗಳನ್ನು ನೂಲ್ಕಿ ಗ್ರಾಮದ ರಸ್ತೆ ನಿರ್ಮಾಣಕ್ಕೆ ಪೂರೈಸಿದರು. ಆದರಿಂದ ಬಂದ ಹಣವನ್ನು ಭೂಮಿ ಹದಗೊಳಿಸಲು ಖರ್ಚು ಮಾಡಿದರು. ಕಲ್ಲುಮಿಶ್ರಿತ ಭೂಮಿ ಇರುವ ಮಹಾರಾಷ್ಟ್ರದ ರಾಲೇಗಾಂವ್‌ಸಿದ್ಧಿ, ಜಲಗಾಂವ್‌ಗೆ ತೆರಳಿ ಅಲ್ಲಿನ ಕೃಷಿಕರು ಯಾವ ಬೆಳೆ ಬೆಳೆಯುತ್ತಾರೆ ಎಂಬ ಬಗ್ಗೆ ಅಧ್ಯಯನ ಮಾಡಿದರು. ಧಾರವಾಡ ಕೃಷಿ ವಿವಿಯ ವಿಜ್ಞಾನಿಗಳನ್ನು ಹೊಲಕ್ಕೆ ಕರೆದೊಯ್ದು ಮಣ್ಣು ಪರೀಕ್ಷೆ ಮಾಡಿಸಿದರು. ವಿಜ್ಞಾನಿಗಳ ಸಲಹೆ ಮೇರೆಗೆ ಹೊಲದಲ್ಲಿ ದೊಡ್ಡ ಕೆರೆ ನಿರ್ಮಿಸಿದರು. ಆ ನೀರನ್ನು ಬಳಸಿ ಆಡಕೆ ನೇರಿ ವಿವಿಧ ಬೆಳೆ ಬೆಳೆದಿದ್ದಾರೆ.

30 ಎಕರೆ ಜಮೀನು ಖರೀದಿ

ಪಾಟೀಲ ಅವರು 60 ವರ್ಷಗಳಿಂದ ಕೃಷಿ ಮಾಡುತ್ತಲೇ ಈವರೆಗೆ 30 ಎಕರೆ ಭೂಮಿ ಸಂಪಾದಿಸಿದ್ದಾರೆ. ತೋಟದಲ್ಲಿ ವಿವಿಧ ತಳಿಯ 14 ಹಸುಗಳನ್ನು ಸಾಕಿದ್ದಾರೆ. ಗೋಮೂತ್ರ ಮತ್ತು ಸಗಣಿಯಿಂದ ಜೀವಾಮೃತ ತಯಾರಿಸಿ ಬೆಳೆಗಳಿಗೂ ಬಳಸುತ್ತಾರೆ. ಕೋಳಿ ಸಾಕಾಣಿಕೆಯನ್ನೂ ಮಾಡುತ್ತಿದ್ದಾರೆ.

ರೈತರು ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು. ಭೂಮಿಯಲ್ಲಿ ಶಕ್ತಿಯಿಂದ, ಪರಿಶ್ರಮಪಟ್ಟು ಕೆಲಸ ಮಾಡಬೇಕು. ಪ್ರಾಮಾಣಿಕತೆ, ಸದ್ಭಡ ಬದುಕಿನತ್ತ ಯೋಚಿಸಬೇಕು.

। ಡಾ. ಡಿ.ಟಿ. ಪಾಟೀಲ ಮಾವಿನಕರ ರೈತ

ಪಾಟೀಲ ಅವರು ವಿವಿಧ ಇಲಾಖೆಗಳ ಯೋಜನೆಗಳಿಂದ ಈವರೆಗೆ ಅಂದಾಜು 22 ಲಕ್ಷ ರೂ. ಸಹಾಯಧನ ಪಡೆದಿದ್ದಾರೆ. ತೋಟಗಾರಿಕೆ, ಅರಣ್ಯ, ಕೃಷಿ ಬೆಳೆಗಳನ್ನು ಸಮೃದ್ಧವಾಗಿ ಬೆಳೆದಿದ್ದಾರೆ. ಚೀನಾ, ಗುಜರಾತ್, ಮಹಾರಾಷ್ಟ್ರ, ಆಂಧ್ರಪದೇಶ, ಕೇರಳದ ಕೃಷಿ ಪದ್ಧತಿ ಅಧ್ಯಯನ ಮಾಡಿ ಇಲ್ಲಿಯೂ ಆ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ.

। ಕಾಶಿನಾಥ ಭದ್ರಣ್ಣವರ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು, ಧಾರವಾಡ

ಮಿಶ್ರ ಬೆಳೆಯಲ್ಲಿ ಆದಾಯ

ಮೂರು ಎಕರೆಯಲ್ಲಿ 1,800 ಆಡಕೆ ಗಿಡಗಳಿದ್ದು, 13 ಲಕ್ಷ ರೂ.ಗೆ ಗುತ್ತಿಗೆ ನೀಡಲಾಗಿದೆ. 550 ಅಪೂಸ್ ತಳಿಯ ಮಾವಿನ ಗಿಡಗಳಿದ್ದು, ಈ ವರ್ಷ 15 ಟನ್ ಇಳುವರಿ ನಿರೀಕ್ಷೆ ಇದೆ. 2006-07ರಲ್ಲಿ 14 ಎಕರೆ ಹೊಲದ ಸುತ್ತ 2,200 ಸಾಗವಾನಿ ಸಸಿಗಳನ್ನು ನಾಟಿ ಮಾಡಿದ್ದರು. ಅವುಗಳಲ್ಲಿ ಶೇ.30 ಗಿಡಗಳು ಕಟಾವಿಗೆ ಬಂದಿವೆ. 1 ಗಿಡ ಅಂದಾಜು 30 ಸಾವಿರ ರೂ. ಬೆಲೆ ಬಾಳುತ್ತದೆ. ಜತೆಗೆ 180 ತೆಂಗಿನ ಗಿಡಗಳಿವೆ. 2 ಎಕರೆಯಲ್ಲಿ ಶ್ರೀಗಂಧ, ನೇಲು ನಾಟಿ, 4 ಎಕರೆಯಲ್ಲಿ ಗೋಡಂಬಿ ಬೆಳೆಯುತ್ತಿದ್ದಾರೆ. 2025ರಲ್ಲಿ ನೇಲು 8 ಕ್ವಿಂಟಾಲ್ ಇಳುವರಿ ಬಂದಿದ್ದು, ಕೆ.ಜಿ 150 ರೂ.ಗೆ ಮಾರಾಟ ಮಾಡಿದ್ದಾರೆ.

ಬಗೆಬಗೆಯ ಮರ: ಗೋಡಂಬಿ ತೋಟದಲ್ಲಿ ಏಲಕ್ಕಿ ದಾಲ್ಚಿನ್ನಿ, ಲವಂಗ, ಕೋಲ್ಕತ ಎಲೆ, ಹಲಸು, ಚಿಕ್ಕು ಕಲ್ಲಂಗಡಿ, ನೆಲ್ಲಿ, ಪೇರಲ, ಬಾಲೆ, ಮೋಸಂಬಿ, ಕರಿಬೇವು, ನುಗ್ಗೆ ಬೆಳೆದಿದ್ದಾರೆ.



ಕೃಷಿ ಏಷಿ ಗೌರವ ಡಾಕ್ಟರೇಟ್

ಪಾಟೀಲರ ಸಾಧನೆ ಗುರುತಿಸಿ ಧಾರವಾಡ ಕೃಷಿ ವಿವಿಯ 2025ರ ಮೇ 14ರಂದು ಗೌರವ ಡಾಕ್ಟರೇಟ್ ನೀಡಿದೆ. 2023ರಲ್ಲಿ ರಾಷ್ಟ್ರೋತ್ಥವ ಪ್ರಶಸ್ತಿ, 2011ರಲ್ಲಿ ರಾಜ್ಯಮಟ್ಟದ ಶ್ರೇಷ್ಠ ಕೃಷಿ ಪಂಡಿತ, ನೇರಿ ನೂರಾರು ಪ್ರಶಸ್ತಿಗಳು ಲಭಿಸಿವೆ. ದ್ಯಾವನಗೌಡ ಪತ್ನಿ ಹೇಮಾ ಅವರೂ 2011ರಲ್ಲಿ ರಾಜ್ಯ ಮಟ್ಟದ ಶ್ರೇಷ್ಠ ಕೃಷಿ ಪಂಡಿತ ಪ್ರಶಸ್ತಿಗೆ ಭಾಜನರಾಗಿದ್ದಾರೆ. ದಂಪತಿಗೆ ಮೂವರು ಗಂಡು ಮಕ್ಕಳಿದ್ದು, ಇಬ್ಬರು ಕೃಷಿ ಮಾಡುತ್ತಿದ್ದಾರೆ. ಅವರಿಗೂ ಜಿಲ್ಲಾಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ ಲಭಿಸಿವೆ.

ಉಮೇಶ ಬಳಬಟ್ಟಿ ಇಂಡಿ

ಎಕರೆಗೆ 172 ಟನ್ ಕಬ್ಬು

ವಿಜ್ಞಾನಿಗಳಿಂದ ಮಾಹಿತಿ ಪಡೆದು ಸಮಯಕ್ಕೆ ಸರಿಯಾಗಿ ಗೊಬ್ಬರ ನೀಡಿದ್ದೇನೆ. ಹನಿ ನೀರಾವರಿ ಅಳವಡಿಸಿ, 46 ಸಾವಿರ ರೂ. ಖರ್ಚು ಮಾಡಿ, 172 ಟನ್ ಕಬ್ಬು ಪ್ರತಿ ಎಕರೆಯಲ್ಲಿ ಬೆಳೆದಿದ್ದರಿಂದ ಎಕರೆಗೆ ಕನಿಷ್ಠ 4.5 ಲಕ್ಷ ರೂ. ಆದಾಯ ಬಂದಿದೆ.

। ಶ್ರೀಮಂತ ಇಂಡಿ ಕಬ್ಬು ಬೆಳೆದ ಪ್ರಗತಿಪರ ರೈತ





ಒಂದು ಎಕರೆಯಲ್ಲಿ ಅಬ್ಬಬ್ಬಾ ಎಂದರೆ 40 ರಿಂದ 50 ಟನ್ ಕಬ್ಬು ಬೆಳೆಯಬಹುದು. ಆತೀ ಹೆಚ್ಚು ಎಂದರೆ 80 ರಿಂದ 100 ಟನ್ ಬೆಳೆಯಬಹುದು. ಆದರೆ ಇಲ್ಲೊಬ್ಬ ರೈತರು ಒಂದು ಎಕರೆಯಲ್ಲಿ 172 ಟನ್ ಕಬ್ಬು ಬೆಳೆದು ಹುಬ್ಬೇರಿಸುವಂತೆ ಮಾಡಿದ್ದಾರೆ. ಅವರೇ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ 'ಶ್ರೀಮಂತ ಇಂಡಿ'. ಪ್ರಗತಿಪರ ರೈತರಾಗಿರುವ ಇವರು ಇಂಡಿ ತಾಲೂಕಿನ ಲಬ್ಯಾಣ ಗ್ರಾಮದಲ್ಲಿ ಜಮೀನು ಖರೀದಿಸಿ, ಅಲ್ಲಿ ಎಕರೆಗೆ ನೂರು ಟನ್ ಬೆಳೆಯುವ ಛಲದಿಂದ ನಾಟಿಯಿಂದ ಹಿಡಿದು ಕಟಾವಿನ ತನಕ ತಾವೇ ಮುಂದೆ ನಿಂತು ಕೃಷಿ ಮಾಡಿದ್ದರು. ಇವರಿಗೆ ಗೊಳಸಂಗಿಯ ಮಾತೆ ಸ್ವೀನಿಕ ನಾರಾಯಣ ಸಾಳುಂಕೆಯವರು ಸಾಥ್ ನೀಡಿದ್ದು, ಈಗ ನಿರೀಕ್ಷೆಗೂ ಮೀರಿ ಕಬ್ಬು ಬೆಳೆದು ಎಲ್ಲರ ಮನಸೆಳೆದಿದ್ದಾರೆ.

ಹನಿ ನೀರಾವರಿ ಅಳವಡಿಕೆ: ಕಬ್ಬು ತಳಿ ಶಾಸ್ತ್ರ ವಿಜ್ಞಾನಿ, ಸಂಕೇಶ್ವರದ ಸಂಜಯ ಪಾಟೀಲ ಅವರಿಂದ ಸಸಿಗಳನ್ನು ತಂದು, ಕಳೆದ ಡಿಸೆಂಬರ್‌ನಲ್ಲಿ ಸಾಲಿನಿಂದ ಸಾಲಿಗೆ 7 ಅಡಿ, ಆಗಿಯಿಂದ ಆಗಿಗೆ ಒಂದು ಅಡಿ ನಾಟಿ ಮಾಡಿದ್ದರು. ತಿಪ್ಪೆಗೊಬ್ಬರ, ಮಳ್ಳಿ ಗೊಬ್ಬರ, ಜೈವಿಕ ಜೀವಾಣು ಬಳಕೆ, ಲಘು ಪೋಷಕಾಂಶ, ಡ್ರಿಂಕ್ ಸಲ್ಫೇಟ್, ಕಬ್ಬಿಣ ಸಲ್ಫೇಟ್, ಸಾರಜನಕ, ರಂಜಕ, ಪೊಟ್ಯಾಷಿಯಂ, ಪೋಷಕಾಂಶಗಳ ಶಿಫಾರಸು ಅನ್ವಯ ವಿಶಿಷ್ಟ ವಿಜ್ಞಾನ ನೂತನ ತಾಂತ್ರಿಕತೆಯಿಂದ ಹನಿ ನೀರಾವರಿ ಪದ್ಧತಿ ಅಳವಡಿಸಲಾಗಿದ್ದು, ಇಳುವರಿ ಹೆಚ್ಚಳಕ್ಕೆ ಪೂರಕವಾಗಿದೆ.

ಇಂಡಿ ತಾಲೂಕಿನ ಲಬ್ಯಾಣ ಗ್ರಾಮದಲ್ಲಿ ಪ್ರಗತಿಪರ ರೈತ ಶ್ರೀಮಂತ ಇಂಡಿಯವರ ಕಬ್ಬಿನ ಹೊಲದಲ್ಲಿ ಎಕರೆಗೆ 172 ಟನ್ ಬೆಳೆದಿರುವ ಕಬ್ಬನ್ನು ತೂಕ ಮಾಡುತ್ತಿರುವ ಅಧಿಕಾರಿಗಳು, ರೈತ ಬಾಂಧವರು.

ಕಬ್ಬಿನ ಕ್ಷೇತ್ರೋತ್ಸವ ಆಯೋಜನೆ

ಶ್ರೀಮಂತ ಇಂಡಿ ಅವರ ಸಾಧನೆ ಗುರುತಿಸಿ ಇಂಡಿ, ವಿಜಯಪುರ ಕೃಷಿ ವಿಜ್ಞಾನ ಕೇಂದ್ರದವರು ತಮ್ಮ ಸಿಬ್ಬಂದಿ, ಕಬ್ಬು ಸಂಶೋಧಕರನ್ನು ಜಮೀನಿಗೆ ಕರೆಯಿಸಿ ಮಾಹಿತಿ ಪಡೆದುಕೊಂಡು ಇತರ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಕಬ್ಬಿನ ಕ್ಷೇತ್ರೋತ್ಸವ, ಪ್ರಾತ್ಯಕ್ಷಿಕೆ ಪ್ರದರ್ಶಿಸಿ, ಮಾಹಿತಿ ನೀಡಿದ್ದಾರೆ. ವಿಜಯಪುರ ಕೃಷಿ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ಅಧಿಕಾರಿಗಳು, ತಾಲೂಕಿನ ಮೂರು ಸಕ್ಕರೆ ಕಾರ್ಖಾನೆಗಳ ವ್ಯವಸ್ಥಾಪಕ ನಿರ್ದೇಶಕರು, ನೂರಾರು ರೈತರ ಮಜ್ಜೆ ಕಬ್ಬನ್ನು ಕಟಾವು ಮಾಡಿಸಿ, ತೂಕ ಮಾಡಿ ಪ್ರತಿ ಎಕರೆಗೆ 172 ಟನ್ ಬೆಳೆದಿದ್ದನ್ನು ಖಚಿತಪಡಿಸಿಕೊಂಡಿದ್ದು ವಿಶೇಷ.

Bengaluru Edition
Mar 23, 2026 Page No. 6
Powered by: erelego.com

Vijayavani Pg.5Ac

ಜಿಲ್ಲೆಯಲ್ಲಿ 27,959 ಹೆಕ್ಟೇರ್‌ನಲ್ಲಿ ತೆಂಗು ಬೆಳೆ | ಕಪ್ಪುತಲೆ ಹುಳು, ಬಿಳಿನೊಣ, ಬೆಂಕಿ ರೋಗ ತಡೆಗೆ ಇಲಾಖೆ ಮುಂದು

ತೆಂಗು ಬೆಳೆಗೆ ರೋಗಬಾಧೆ: ಸಮೀಕ್ಷೆ ನಡೆಸಿ ರಕ್ಷಣೆಗೆ ಕ್ರಮ

ಪಿ.ವೈ.ರವಿಂದ್ರ ಹೇರ್ಳೆ



ತೆಂಗಿನ ಕಪ್ಪು ತಲೆ ಹುಳು ಮತ್ತು ಬಿಳಿ ನೊಣ ಬಾಧೆ ನಿಯಂತ್ರಿಸಲು ರೈತರಿಗೆ ಸಲಹೆ ನೀಡಲಾಗುತ್ತಿದೆ. ಈ ರೋಗದ ಸಮೀಕ್ಷೆ ವರದಿಯನ್ನು ಜಿಲ್ಲಾವರು ತಿಂಗಳೊಳಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸುತ್ತೇವೆ. ಪಿ.ಆರ್.ಗಳು ತೋಟಕ್ಕೆ ಬಂದಾಗ ರೈತರು ಅಗತ್ಯ ಸಹಕಾರ ನೀಡಬೇಕು.

■ ಮಂಜುನಾಥ್ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂ.ದ. ಜಿಲ್ಲೆ



ಸಮೀಕ್ಷೆಯ ಉದ್ದೇಶವೇನು

- ಜಿಪಿಎಸ್ ಆಧಾರಿತ ಮೊಬೈಲ್ ಅಪ್ಲಿಕೇಷನ್ ಅನ್ನು ಬಳಸಿ ಸರ್ವೆ ನಂಬರ್, ಉಪ ಸರ್ವೆ ನಂಬರ್ ವಾರು ತೆಂಗಿನಲ್ಲಿ ಕಪ್ಪು ತಲೆ ಹುಳು ಹಾಗೂ ಬಿಳಿ ನೊಣ ಬಾಧಿತ ಪ್ರದೇಶದ ನಿಖರ ಮಾಹಿತಿ ದಾಖಲಿಸುವುದು.
- ತೆಂಗಿನಲ್ಲಿ ಕಪ್ಪು ತಲೆ ಹುಳು ಹಾಗೂ ಬಿಳಿ ನೊಣ ಬಾಧೆಯನ್ನು ಗುರುತಿಸಿ ಇ ಗವರ್ನೆನ್ಸ್ ಅಭಿವೃದ್ಧಿ ಪಡಿಸಿದ ಕ್ರಾಪ್ ಇನ್‌ಸ್ಪೆಕ್ಷನ್ ಬಿಎಚ್‌ಸಿ ಆಪ್ ಮೂಲಕ ಮರು ಭೂಮಾಪನೆ ಸಮೀಕ್ಷೆ ನಡೆಸುವುದು.

ಸಾಧ್ಯತೆ ಹೆಚ್ಚಾಗಿದೆ.

ಮರು ಸರ್ವೆ ಕಾರ್ಯ: ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು, ರೋಗ ಬಾಧಿತ ಪ್ರದೇಶಗಳಲ್ಲಿ 'ಮೆಸ್ಸ್ ಸಮೀಕ್ಷೆ ನಡೆಸಿ ಒಂದು ತಿಂಗಳೊಳ

ವಿಜಯ ಕರ್ನಾಟಕ

ಜೇನುತುಪ್ಪ ಗುಣಮಟ್ಟ ಖಾತ್ರಿಗೆ ಪ್ರಯೋಗಾಲಯ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಶುರುವಾಗಲಿದೆ ಆಧುನಿಕ ಲ್ಯಾಬ್

■ ಎಚ್.ಪಿ.ಪುಣ್ಯವತಿ ಬೆಂಗಳೂರು
punyavathi.hp@timesofindia.com

ಎಂಥದೇ ಬ್ರ್ಯಾಂಡ್‌ನ ಜೇನುತುಪ್ಪವನ್ನು ಮನೆಗೆ ತಂದರೂ ಇದು ಅಸಲಿಯದ್ದಾ ಎಂಬ ಪ್ರಶ್ನೆ ಮೂಡುವುದು ಸಹಜ. ಯಾಕೆಂದರೆ ಮಾರುಕಟ್ಟೆಯಲ್ಲಿ ನಕಲಿ ಜೇನುತುಪ್ಪ ಮಾರಾಟದ ಹಾವಳಿ ಹೆಚ್ಚಾಗಿದ್ದು, ನೈಜ ಜೇನುತುಪ್ಪವನ್ನು ಪೀರಿಸುವಂತಹ ರುಚಿ, ಬಣ್ಣವನ್ನು ಹೊಂದಿರುತ್ತದೆ. ಹೀಗಾಗಿ ಜೇನಿನ ಒಷಯದಲ್ಲಿ ಅಷ್ಟು ಸುಲಭವಾಗಿ ನಂಬುವುದು ಕಷ್ಟ. ಇನ್ನು ಮುಂದೆ ಆ ಬಾಧೆ ಕಳ್ಗಲಿದೆ.

ಯಾಕೆ ಆಂತೀರಾ? ಜೇನುತುಪ್ಪದ ಅಸಲಿಯತ್ತು ಪರೀಕ್ಷಿಸಿ, ಗುಣಮಟ್ಟವನ್ನು ಖಾತ್ರಿ ಪಡಿಸುವ ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ರೆಸೋನನ್ಸ್ (ಎನ್‌ಎಂಆರ್) ತಂತ್ರಜ್ಞಾನ ಸೌಲಭ್ಯ ಹೊಂದಿರುವ ಜೇನುತುಪ್ಪ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯ ಬೆಂಗಳೂರು ಕೃಷಿ ಪಿಪ ಆವರಣದಲ್ಲಿ ಶಲೆ ಎತ್ತಲಿದೆ. ಇದಕ್ಕಾಗಿ ಕಟ್ಟಡವೂ ಸಿದ್ಧಗೊಂಡಿದೆ. ಯಂತ್ರೋಪಕರಣಗಳು ಅಳವಡಿಕೆಯಾಗಬೇಕಿದ್ದು, ಶೀಘ್ರದಲ್ಲೇ ಆರಂಭವಾಗಲಿದೆ.

ಎನ್‌ಎಂಆರ್ ತಂತ್ರಜ್ಞಾನವು ಜೇನುತುಪ್ಪದ ದತ್ತಾಂಶ ಆಧರಿಸಿ ನಿಖರ ವರದಿ ನೀಡಲಿದ್ದು, ಕಲಬೆರಕೆ ಪತ್ತೆ ಹಚ್ಚುತ್ತದೆ. ಈ ತಂತ್ರಜ್ಞಾನದ ಮೂಲಕ ಪಡೆದ ಪ್ರಮಾಣಪತ್ರಕ್ಕೆ ಜಾಗತಿಕ ಮಾನ್ಯತೆಯೂ ಸಿಗಲಿದೆ. ''ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಜೇನುತುಪ್ಪ ರಫ್ತು ಮಾಡುವವರು ನಿಗದಿತ ದರ ಪಾವತಿಸಿ ಪ್ರಮಾಣಪತ್ರವನ್ನು ಪಡೆದುಕೊಳ್ಳಲು ಅವಕಾಶವಿದೆ. ಹಾಗೂ ಉತ್ಪಾದಕರು ಎನ್‌ಎಂಆರ್ ಆಧಾರಿತ ಜೇನು ಪರೀಕ್ಷಾ ಪ್ರಮಾಣಪತ್ರವನ್ನು ಪಡೆಯಬೇಕಾಗುತ್ತದೆ,'' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ ತಿಳಿಸಿದರು.

''ಕಟ್ಟಡ ನಿರ್ಮಾಣ ಹಾಗೂ ಯಂತ್ರೋಪಕರಣ ಖರೀದಿಗಾಗಿ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದಿಂದ 10.30 ಕೋಟಿ ರೂ. ಮತ್ತು ಎಚ್‌ಎಲ್‌ನಿಂದ 4.80 ಕೋಟಿ ರೂ. ಪಣಕಾಸು ನೆರವು ಲಭಿಸುತ್ತಿದೆ. ಸ್ವಾವಶ್ಯಕತೆ ಮತ್ತು ತಾಂತ್ರಿಕ ಸಿಬ್ಬಂದಿಯನ್ನು ಜಕಟಿಕೆ ಒದಗಿಸುತ್ತಿದೆ,'' ಎಂದರು.

ಶೇ.100ರಷ್ಟು ಖಾತ್ರಿ



ಹಿಮಾಲಯ, ನೀಲಗಿರಿ ಕಾಡು, ಊಟಿ, ಬಳಿಗಿರಿರಂಗನ ಬೆಟ್ಟ ಹೀಗೆ ನಾನಾ ವಲಯಗಳ ಜೇನುತುಪ್ಪವನ್ನು ಸಂಗ್ರಹಿಸಿ, ಜೇನುತುಪ್ಪ ಉತ್ಪಾದನೆಯ ಸ್ಯಮೂಲ, ಭೌಗೋಳಿಕ ನೆಲೆಯನ್ನು ಈ ಆತ್ಯಾಧುನಿಕ ತಂತ್ರಜ್ಞಾನದ ಮೂಲಕ ಕೋಧಿಸಿ ದತ್ತಾಂಶಗಳನ್ನು ಸಂಗ್ರಹ ಮಾಡಲಾಗುತ್ತದೆ. ಜಿಕೆಒಕೆಯಲ್ಲಿ ಆರಂಭವಾಗಲಿರುವ ಎನ್‌ಎಂಆರ್ ಪ್ರಯೋಗಾಲಯ ಸ್ಥಳೀಯವಾಗಿ ಲಭ್ಯವಿದ್ದು ಜಾಗತಿಕ ಮಾನದಂಡಗಳನ್ನು ಆಧರಿಸಿ ಜೇನುತುಪ್ಪ ಗುಣಮಟ್ಟದ ಪ್ರಮಾಣಪತ್ರ ನೀಡಲಿದೆ. ಜೇನುತುಪ್ಪ ರಫ್ತು ಮಾಡುವವರು ನಿಗದಿತ ದರ ಪಾವತಿಸಿ ಪ್ರಮಾಣಪತ್ರವನ್ನು ಪಡೆದುಕೊಳ್ಳಲು ಅವಕಾಶವಿದೆ.

ಯಂತ್ರಗಳನ್ನು ಅಳವಡಿಸಿದ ನಂತರ ದರ ನಿಗದಿ

ಜೇನುತುಪ್ಪದಲ್ಲಿ ಒಶ್ರಣ ಮಾಡುವ ಸಕ್ಕರೆ, ಬೆಲ್ಲದ ಅಂಶ, ರೈನ್ ಸಿರಪ್ ನೇರವಂತೆ ಬೇರೆ ಅಂಶಗಳನ್ನು ಎನ್‌ಎಂಆರ್ ತಂತ್ರಜ್ಞಾನ ಸುಲಭವಾಗಿ ಪತ್ತೆ ಹಚ್ಚಲಿದೆ. ಮನೆ ಬಳಕೆಯ ಗ್ರಾಪಕರು ಹಾಗೂ ಜೇನು ರಫ್ತು ಮಾಡುವ ಉದ್ಯಮಿಗಳು ಕೂಡ ಪ್ರಯೋಗಾಲಯದ ಲಾಭ ಪಡೆಯ ಬಹುದು. ಯಂತ್ರೋಪಕರಣಗಳನ್ನು ಜರ್ಮನಿಯಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಯಂತ್ರೋಪಕರಣ ಸ್ಥಾಪನೆ ಬಳಕ, ಯೋಜನೆ ಮೆಚ್ಚ ಆಧರಿಸಿ ಜೇನು ತುಪ್ಪ ಪರೀಕ್ಷೆಗೆ ದರ ನಿಗದಿಪಡಿಸಲು ತೀರ್ಮಾನಿಸಲಾಗಿದೆ.

Main Edition
Mar 22, 2026 Page No. 15

Vijayakarnataka 22.03.2026 Pg.13

India's dual dependence on West Asia for urea production

Data indicate that the West Asian conflict threatens both domestic urea production and the stability of its global supply chain

DATA POINT

Ditika Francis

The ongoing conflict in West Asia has disrupted global trade, leading to LPG shortages and a surge in crude oil prices. Data show that the crisis could also affect India's supply of Liquefied Natural Gas (LNG), putting at risk the production of urea, a key fertilizer in the country's majorly agrarian economy.

The conflict has already started to impact India's urea supply. As of Sunday, industry sources told *PTI* that the country's urea plants are running at half capacity, with Petronet LNG Ltd, which operates India's largest liquefied natural gas receiving terminal, declaring force majeure amid disruptions to cargoes. The move triggered supply curtailments by state-owned gas distributors GAIL (India) Ltd, Indian Oil Corporation Ltd and Bharat Petroleum Corporation Ltd.

India is heavily dependent on imports for its LNG supply, exposing many of its sectors to global shocks such as the U.S.-Israel attacks on Iran. Data show that in 2025, India bought more than 50% of its natural gas from the international market **(Chart 1)**. In fact, India is the fourth largest buyer of natural gas in the world, with an imported supply of 261 lakh metric tonnes in 2025.

A majority of these imports – more than 40% of it – are tied to long-term contracts with suppliers in Qatar **(Chart 2)**. This supply may be in jeopardy as Qatar's LNG cargoes pass through the Strait of Hormuz, which has now become a central chokepoint in the Iran-Israel conflict. The UAE and Oman also ship LNG along this route, and both countries contribute to India's imported LNG supply. Overall, more than 60% of India's imported LNG could be affected by the closure of the Strait.

In India, natural gas is primarily used to produce ammonia, which in turn is used to produce fertilizers. In FY26, about 30% of India's LNG supply was used for the production of fertilizers **(Chart 3)**. Demand also comes from industry and gas-fired power and city gas networks which supply to households and vehicles.

LNG is the main feedstock for the production of urea, which is the most widely used fertilizer in India. Many urea plants use naphtha or fuel oil – both derived from crude oil - as their main input. However, as urea production is a highly energy-intensive process, these plants have switched to natural gas, which produces fewer emissions.

National urea consumption hit 387 lakh metric tonnes in 2025, following a decade of steady growth. While domestic production has also been increasing (India produced about 306 lakh metric tonnes of urea in 2025), it does not cover the country's demand. Due to this, India also relies on imports of urea.

Data indicate that the West Asian conflict threatens both domestic urea production and the stability of its supply chain. In 2025, India's urea imports exceeded 2,300 lakh metric tonnes, with a staggering 71% of these imports coming from West Asia **(Chart 4)**. This total comprises 45% from Oman and a combined 26% from Saudi Arabia, Qatar, and the UAE, all of which rely on the Strait of Hormuz for transit.

Amidst this scenario, the Government of India issued the Natural Gas (Supply Regulation) Order, 2026, officially including the fertilizer sector in its priority list.

The government also stated that as of March 10, India's urea reserves have reached 61.51 lakh metric tonnes, about 10 lakh more than last year, ahead of the Kharif sowing season. However, only time can tell if India's import dependence for both domestic production and global supply trade will weather the ongoing geopolitical instability.



Distressed supply: A farmer sprinkles fertilizer on a paddy field in the Nagaon district, Assam

Crop hazard

The data for the charts were sourced from the Ministry of Trade and Commerce, the Department of Fertilizers, and the International Gas Union

Chart 1: The composition of India's LNG supply in 2025-26 (in %)




Chart 2: Country-wise share (%) of India's LNG imports in 2024-25




Chart 3: The distribution of LNG use in India in 2025-26 (in %)





Chart 4: Country-wise share (%) of India's urea imports in 2024-25



1 Industry sources said that the country's urea plants are running at half capacity

2 Natural gas is used to produce ammonia, which in turn is used to produce fertilizers

3 LNG is the main feedstock for the production of urea, which is the most widely used fertilizer in India

4 Chart 3 and 4 only include the top 5 exporting countries

The Hindu Pg.7

ಕನ್ನಡಪ್ರಭ

ಬೇಡಿಕೆ ಭವಿಷ್ಯದ ನೀರಿನ ಬಿಕ್ಕಟ್ಟು ನಿರ್ವಹಣೆಗೆ ಬೇಕಿದೆ ಜಲ ಸಂಪನ್ಮೂಲ ವಿಶ್ವವಿದ್ಯಾಲಯ | ಜಲತಜ್ಞರಿಂದ ಮುಖ್ಯಮಂತ್ರಿಗೆ ಪತ್ರ

ಜಲ ಸಂಪನ್ಮೂಲ ವಿವಿ ಆಗಲಿದೆಯೇ ಧಾರವಾಡದ ವಾಲ್ಮೀ?

• ಬಸವರಾಜ ಹಿರೇಮಠ
ಕನ್ನಡಪ್ರಭ ವಾರ್ತೆ ಧಾರವಾಡ

ಭವಿಷ್ಯದಲ್ಲಿ ನೀರಿಗಾಗಿ ತೀವ್ರ ಬಿಕ್ಕಟ್ಟು ಉಂಟಾಗುವ ಸಾಧ್ಯತೆಗಳ ಹಿನ್ನೆಲೆಯಲ್ಲಿ ಇದಕ್ಕೆ ಸಮಗ್ರ ಮತ್ತು ಸುಸ್ಥಿರ ಪರಿಹಾರಗಳನ್ನು ಒದಗಿಸಲು ನೀರಿನ ನಿರ್ವಹಣೆಯ ಮೇಲೆ ಕೇಂದ್ರೀಕರಿಸಿದ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವಂತೆ ಜಲತಜ್ಞರಿಂದ ಆಗ್ರಹ ಕೇಳಿ ಬಂದಿದೆ.

ಪೂರಕವಾಗಿ ಈಗಾಗಲೇ ಧಾರವಾಡದಲ್ಲಿ ನೀರು ಮತ್ತು ಭೂ ನಿರ್ವಹಣಾ ಸಂಸ್ಥೆ (ವಾಲ್ಮಿ) ಇದ್ದು, ಈ ಸಂಸ್ಥೆಯನ್ನೇ ಜಲ ಸಂಪನ್ಮೂಲ ವಿಶ್ವವಿದ್ಯಾಲಯವಾಗಿ ಮೇಲ್ದರ್ಜೆಗೆ ಏರಿಸಬೇಕೆಂಬ ಬೇಡಿಕೆ ಹಲವು ದಿನಗಳಿಂದ ಇದ್ದು, ಇದೀಗ ಜಲತಜ್ಞರು ಈ ಬಗ್ಗೆ ಮುಖ್ಯಮಂತ್ರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ವಾಲ್ಮೀಯೇ ಸೂಕ್ತ: ಸಾಮಾನ್ಯವಾಗಿ ಹೊಸ ವಿಶ್ವವಿದ್ಯಾಲಯಸ್ಥಾಪನೆಈಗಿನಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ಕಷ್ಟಸಾಧ್ಯ. ಈ ಹಿನ್ನೆಲೆಯಲ್ಲಿ ವಾಲ್ಮಿ ಸಂಸ್ಥೆಯನ್ನೇ ಮೇಲ್ದರ್ಜೆಗೇರಿಸುವುದು ಸೂಕ್ತ ಎಂಬ ಚಿಂತನೆ ಹುಟ್ಟಿಕೊಂಡಿದೆ. ವಾಲ್ಮಿ ಸಂಸ್ಥೆಯನ್ನು 1986ರಲ್ಲಿ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇತ್ತೀಚೆಗೆ ರಾಜ್ಯ ಸರ್ಕಾರ ಇದನ್ನು ನೀರಿನ ನಿರ್ವಹಣೆಯಲ್ಲಿ ಶ್ರೇಷ್ಠತೆಯ ಕೇಂದ್ರವೆಂದು ಘೋಷಿಸಿದೆ. ತೈಕ್ಷಣಿಕ ಮತ್ತು ಪ್ರಾಯೋಗಿಕ ತರಬೇತಿ ಬೆಂಬಲಿಸಲು ಸಂಸ್ಥೆಯು ಈಗಾಗಲೇ ಅಗತ್ಯವಾದ ಮೂಲಸೌಕರ್ಯ ಹೊಂದಿದೆ. ಇದು ವಿಶ್ವವಿದ್ಯಾಲಯದ ಸ್ಥಾನಮಾನಕ್ಕೆ ಏರಲು ಸೂಕ್ತವಾಗಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.

ಸಂಸ್ಥೆಯು 75 ಎಕರೆ ಕೃಷಿ ಪ್ರದೇಶ ಒಳಗೊಂಡಂತೆ 137 ಎಕರೆ ಭೂಮಿಯನ್ನು ಹೊಂದಿದೆ. ಜತೆಗೆ, ಆಡಳಿತಾತ್ಮಕ ಬ್ಲಾಕ್, ತೈಕ್ಷಣಿಕ ಕಟ್ಟಡಗಳು, ತರಗತಿಕೊಠಡಿಗಳು, ಪ್ರಯೋಗಾಲಯಗಳು, ಅತಿಥಿಗೃಹ ಮತ್ತು ಹಾಸ್ಟೆಲ್ ಸೌಲಭ್ಯಗಳನ್ನು ಹೊಂದಿದೆ. ಮೂಲ ಸೌಕರ್ಯ ಈಗಾಗಲೇ ಜಾರಿಯಲ್ಲಿರುವುದರಿಂದ ಸರ್ಕಾರ ನೂತನವಿವಿಗೆ ಹೆಚ್ಚುವರಿವೆಚ್ಚಭರಿಸಬೇಕಾಗಿಲ್ಲ ಎನ್ನುವುದು ತಜ್ಞರ ಅಭಿಪ್ರಾಯ.

ಸಿಎಂಗೆ ಪ್ರಸ್ತಾವನೆ: ವಾಲ್ಮಿಯನ್ನು ಜಲಸಂಪನ್ಮೂಲವಿಶ್ವವಿದ್ಯಾಲಯವನ್ನಾಗಿಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ರಾಜ್ಯ ಸರ್ಕಾರ ಈ ಬಗ್ಗೆತುಸು ಆಸಕ್ತಿ ತೋರಿದರೆ, ನಮ್ಮ ತಜ್ಞರು ಮುಖ್ಯಮಂತ್ರಿಯನ್ನು ಭೇಟಿ ಮಾಡಿ ವಿವಿ ಸ್ಥಾಪಿಸುವ ಬಗ್ಗೆವಿಸ್ತೃತವಾಗಿ ಚರ್ಚಿಸಲು ಸಿದ್ಧರಿದ್ದಾರೆಂದು ಹೇಳುವ ವಾಲ್ಮಿ ಮಾಜಿ ನಿರ್ದೇಶಕರು ಹಾಗೂ ಜಲತಜ್ಞ ರಾದ ಡಾ। ರಾಜೇಂದ್ರ ಪೋದ್ದಾರ, ಭಾರತದಲ್ಲಿ ಪ್ರಸ್ತುತ ಅಂತಹ ಯಾವುದೇ ವಿಶೇಷ ವಿವಿ ಇಲ್ಲ ಮತ್ತು ಕರ್ನಾಟಕ ಜಲ ಸಂಪನ್ಮೂಲ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಮುಂಚೂಣಿ ಯಲ್ಲಿರುವ ಮೂಲಕ ಇತರ ರಾಜ್ಯಗಳಿಗೆ ಮಾದರಿಯಾಗಬಹುದು ಎಂದು ಅಭಿಪ್ರಾಯಪಟ್ಟರು.



ನಿರ್ಣಯ ಸರ್ಕಾರಕ್ಕೆ

ಪ್ರತಿ ವರ್ಷ ರಾಜ್ಯದಲ್ಲಿ ನೀರಿನ ಬೇಡಿಕೆ ಹಾಗೂ ಪೂರೈಕೆ ಹೆಚ್ಚುತ್ತಿದೆ. ಇದು ಆಗಾಗ್ಗೆ ರಾಜ್ಯ-ಹೊರ ರಾಜ್ಯದಲ್ಲಿ ನೀರಿನ ಹಂಚಿಕೆಯ ವಿವಾದಗಳಿಗೆ ಕಾರಣವಾಗುತ್ತದೆ. ಮಿಸಲಾದ ವಿಶ್ವವಿದ್ಯಾಲಯ ರಾಜ್ಯಾದ್ಯಂತ ಹೊಸದಾಗಿ ಸೃಷ್ಟಿಯಾಗುವ ಸಮಸ್ಯೆಗಳಿಗೆ ಪರಿಹಾರ ಮತ್ತು ನೀರು ನಿರ್ವಹಣಾ ಪದ್ಧತಿಗಳನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಜಲತಜ್ಞರು, ಕೃಷಿತಜ್ಞರು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಿದ್ದು, ನಿರ್ಣಯ ಸರ್ಕಾರಕ್ಕೆ ಬಿಟ್ಟಿದ್ದು.

• **ಡಾ। ರಾಜೇಂದ್ರ ಪೋದ್ದಾರ**
ವಾಲ್ಮೀ ಮಾಜಿ ನಿರ್ದೇಶಕ

ಕರ್ನಾಟಕ ದೊಡ್ಡ ಪ್ರಮಾಣದ ಜಲ ಸಂಪನ್ಮೂಲ ಅಭಿವೃದ್ಧಿ ಯೋಜನೆಗಳಿಗೆ ಸಾಕ್ಷಿಯಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಮಳೆಯಾಗುತ್ತಿದ್ದರೂ ಅದನ್ನು ಸರಿಯಾಗಿ ನಿರ್ವಹಿಸದ ಹಿನ್ನೆಲೆಯಲ್ಲಿ ನೀರಿನ ಬೇಡಿಕೆ ಹೆಚ್ಚುತ್ತಲೇ ಇದೆ. ಇದು ಅನೇಕ ಪ್ರದೇಶಗಳಲ್ಲಿ ನೀರಿನ ಕೊರತೆಗೆ ಕಾರಣವಾಗುತ್ತಿದೆ. ನೀರಿನ ನಿರ್ವಹಣೆ ಹೆಚ್ಚು ಸವಾಲಿನದ್ದಾಗುತ್ತಿದ್ದು, ತಜ್ಞರು 2030ರ ವೇಳೆಗೆ ತೀವ್ರ ನೀರಿನ ಬಿಕ್ಕಟ್ಟು ಉಂಟಾಗಲಿದೆ ಎಂದು ಊಹಿಸಿದ್ದಾರೆ. ಇದು ಹೆಚ್ಚಾಗಿ ಜಾಗತಿಕತಾಪಮಾನ ಏರಿಕೆಯಿಂದಾಗಿ ಉಂಟಾಗುತ್ತಿದೆಂದು ಪೋದ್ದಾರ ತಿಳಿಸಿದರು.

ಜಲಸಂಪನ್ಮೂಲ ನಿರ್ವಹಣೆಗೆ ಮೀಸಲಾಗಿರುವ ಸಮಗ್ರ ಸಂಸ್ಥೆಯ ಅಗತ್ಯವಿದೆ. ನಮ್ಮಲ್ಲಿ ಹೆಚ್ಚಿನ ಮಳೆಯಾಗುತ್ತಿದ್ದರೂ, ಹೆಚ್ಚಿನ ಪ್ರಮಾಣದಲ್ಲಿ ನೀರಿದ್ದರೂ ಅದನ್ನು ಸರಿಯಾಗಿ ಬಳಸುತ್ತಿಲ್ಲ. ಜತೆಗೆ ಬರುವ ದಿನಗಳಲ್ಲಿ ನೀರು ಮತ್ತು ಭೂಮಿಗೆ ಸಂಬಂಧಿಸಿದ ಗಂಭೀರ ಸಮಸ್ಯೆಗಳು ಎದುರಾಗುವನಿರೀಕ್ಷೆಯಿದೆ. ಅವುಗಳನ್ನು ನಿವಾರಿಸಲು ಪ್ರತ್ಯೇಕ ವಿಶ್ವವಿದ್ಯಾಲಯ ಅಗತ್ಯವಾಗಿದೆಎಂದು ಭಾರತಏಕತಾ ಆಂದೋಲನದ ಅಧ್ಯಕ್ಷ ಮಹಾದೇವ ಹೊರಟ್ಟಿ ಸಹ ಈ ಪ್ರಸ್ತಾವನೆಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

BENGALURU Edition
Mar 23, 2026 Page No. 04
Powered by: erelego.com

Kannadaprabha pg.04

ಮಾರುಕಟ್ಟೆಗೆ ಲಗ್ಗೆಯಿಟ್ಟ ಹೊರರಾಜ್ಯದ ತೆಂಗು

ತೀವ್ರ ಕುಸಿತದ ಹಾದಿ ಹಿಡಿದ ಕಾಯಿ ಬೆಲೆ | ಬೆಳೆಗಾರರಿಗಿಲ್ಲ ಖುಷಿ, ಗ್ರಾಹಕರು ನಿರಾಳ

■ ಗಂಗಾಧರ್ ಬೈರಾಪಟ್ಟಣ ರಾಮನಗರ

ಕಳೆದೆರಡು ವರ್ಷಗಳಿಗೂ ಹೆಚ್ಚು ಕಾಲದಿಂದ ಸಾರ್ವಕಾಲಿಕ ಉತ್ತುಂಗದಲ್ಲಿದ್ದ ತೆಂಗಿನ ಬೆಲೆ ಈಗ ಕುಸಿತದ ಹಾದಿ ಹಿಡಿದಿದ್ದು, ಕೆ.ಜಿ.ಗೆ 50 ರೂ. ಆಸುಪಾಸಿಗೆ ಬಂದು ನಿಂತಿದೆ. ಇದಕ್ಕೆ ಮಾರುಕಟ್ಟೆಗೆ ಲಗ್ಗೆ ಇಟ್ಟ ಹೊರರಾಜ್ಯದ ಕಾಯಿಯೂ ಕಾರಣ ಎಂಬ ಮಾತು ಕೇಳಿಬಂದಿದೆ. ಈ ಬೆಳವಣಿಗೆ ಗ್ರಾಹಕರಿಗೆ ತುಸು ನಿರಾಳವೆನಿಸಿದರೆ ಬೆಳೆಗಾರರ ಖುಷಿಯನ್ನು ಕಸಿದಿದೆ.

2024ರ ಬೇಸಿಗೆಯ ಬಿಸಿಲ ಬೇಗೆಗೆ ಬಹುತೇಕ ತೆಂಗು ನೆಲಕಚ್ಚಿ ಇಳುವರಿ ಕುಂಠಿತವಾದ ಪರಿಣಾಮ ಕಳೆದ ಎರಡು ವರ್ಷಗಳಿಂದಲೂ ತೆಂಗು ಬೆಲೆ 60ರಿಂದ 80 ರೂ.ವರೆಗೆ ಏರಿಳಿತ ಆಗುತ್ತಲೇ ಇತ್ತು. ಇದು ರೈತರಿಗೆ ಸಂತಸವನ್ನೂ ತಂದಿತ್ತು. ಆದರೆ ಈ ಬಾರಿ ಯುಗಾದಿಯಲ್ಲಿ ಬೆಲೆ ಏರಿಕೆ ಆಗಬಹುದು ಎನ್ನುವ ನಿರೀಕ್ಷೆಯಲ್ಲಿದ್ದ ರೈತರಿಗೆ ಶಾಕ್ ಆಗಿದ್ದು, ತೆಂಗು ಬೆಲೆ ಪ್ರತಿ ಕೆ.ಜಿ.ಗೆ 50 ರೂ. ನಿಂದ ಮೇಲೆ ಏಳಲೇ ಇಲ್ಲ. ಮುಂದಿನ ದಿನಗಳಲ್ಲಿ ಇದು ಪ್ರತಿ ಕೆ.ಜಿ.ಗೆ 40 ರೂ.ಗೆ ಇಳಿಕೆ ಆದರೂ ಆಶ್ಚರ್ಯ ಪಡಬೇಕಿಲ್ಲ ಎನ್ನುತ್ತಾರೆ ವ್ಯಾಪಾರಿಗಳು.

ಸದ್ಯ ಬೆಂ. ದಕ್ಷಿಣ ಜಿಲ್ಲೆಯ ಮಾರುಕಟ್ಟೆಯಲ್ಲಿ ಸಗಟು ಖರೀದಿಯಲ್ಲಿ ತೆಂಗಿನ ಕಾಯಿ ಪ್ರತಿ ಕೆಜಿಗೆ 50 ರೂ.ವರೆಗೂ ರೈತರಿಗೆ ಸಿಗುತ್ತಿದೆ. ಯುಗಾದಿಯಲ್ಲಿ ತೆಂಗು ಬೆಲೆ 60-65 ರೂ.ಗೆ ತಲುಪಬಹುದು ಎನ್ನುವ ನಿರೀಕ್ಷೆ ಇತ್ತು. ಮತ್ತೊಂದೆಡೆ ರಂಜಾನ್‌ಗೂ ತೆಂಗು ಬಳಕೆ ಆಗುವುದರಿಂದ ಬೆಲೆ ಇಳಿಕೆ ಆಗುವುದಿಲ್ಲ ಎನ್ನುವ ಬಲವಾದ ನಂಬಿಕೆ ರೈತರು ಮತ್ತು ಮಾರುಕಟ್ಟೆಯಲ್ಲಿ ಇತ್ತು. ಈಗ ಜಿಲ್ಲೆಯ ತೆಂಗಿನ ತೋಟಗಳಲ್ಲಿ ಹೆಚ್ಚಿನ ಫಸಲೇನೂ ಇಲ್ಲ. ಆದರೂ ಬೇಡಿಕೆ ಕುಸಿತವಾಗಲು ಹೊರ ರಾಜ್ಯದ ತೆಂಗು ರಾಜ್ಯಕ್ಕೆ ಮತ್ತೆ ಲಗ್ಗೆ ಕಾರಣ ಎನ್ನುವುದು ವ್ಯಾಪಾರಸ್ಥರ ಅನಿಸಿಕೆ. ಮಧ್ಯಪ್ರಾಚ್ಯದ ಯುದ್ಧದ ಪರಿಣಾಮ ವಾಣಿಜ್ಯ ಸಿಲಿಂಡರ್ ಪೂರೈಕೆ ವ್ಯತ್ಯಯ ಹಿನ್ನೆಲೆಯಲ್ಲಿ ಹೋಟೆಲ್‌ಗಳಲ್ಲೂ ತೆಂಗಿಗೆ ಬೇಡಿಕೆ ಕುಸಿದಿದೆ.


ರಾಮನಗರ ಜಿಲ್ಲೆಯ ತೋಟವೊಂದರಲ್ಲಿ ತೆಂಗು ಸಂಗ್ರಹಿಸಿರುವುದು.

ಯುಗಾದಿಗೆ ತೆಂಗು ಬೆಲೆ ಏರಿಕೆ ಆಗಬಹುದು ಎನ್ನುವ ನಿರೀಕ್ಷೆ ಇತ್ತು. ಆದರೆ ತಮಿಳುನಾಡು ಮತ್ತು ಕೇರಳ ರಾಜ್ಯದಿಂದ ಹೆಚ್ಚಿನ ಪ್ರಮಾಣದ ತೆಂಗು ಕಡಿಮೆ ಬೆಲೆಗೆ ರಾಜ್ಯದ ಮಾರುಕಟ್ಟೆಗೆ ಬರುತ್ತಿರುವುದರಿಂದ ರಾಜ್ಯದಲ್ಲಿ ತೆಂಗು ಬೆಲೆ ಕುಸಿತ ದಾಖಲಿಸಿದೆ.
| ವಾಸು ಮುಕುಂದ
ತೆಂಗು ವ್ಯಾಪಾರಿ

3-4 ತಿಂಗಳ ಹಿಂದೆ 70 ರೂ. ಆಸುಪಾಸಿನಲ್ಲಿದ್ದ ತೆಂಗು ಬೆಲೆ ಈಗ ದಿಢೀರ್ ಕುಸಿತ ಕಂಡಿದೆ. ತೋಟದಲ್ಲಿ ರೋಗ ಬಾಧೆ ಹಾಗೂ ಬಿಸಿಲ ತಾಪಕ್ಕೆ ಫಸಲೂ ಇಲ್ಲ. ಹೀಗೆ ಆದರೆ ಮುಂದಿನ ದಿನಗಳಲ್ಲಿ ನಮಗೆ ಕಷ ವಾಗಲಿದೆ.
| ರಾಜೇಶ್
ಬೆನ್ನಪಟ್ಟಣದ ರೈತ

ಇಳುವರಿಯೂ ಕುಸಿತ

ಜಿಲ್ಲೆಯಲ್ಲಿ ಸುಮಾರು 35 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದ್ದು, ಚನ್ನಪಟ್ಟಣ ತಾಲೂಕು ಒಂದರಲ್ಲಿಯೇ 11 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆ ಇದೆ. ಕಳೆದ ಹಲವಾರು ವರ್ಷಗಳಿಂದಲೂ ಬೆಂಕಿ ರೋಗ, ನುಸಿ ಪೀಡೆಯಂತಹ ರೋಗಗಳನ್ನು ರೈತರು ಎದುರಿಸಿದ್ದಾರೆ. ಈಗಲೂ ನುಸಿ ಪೀಡೆ ವ್ಯಾಪಕವಾಗಿದೆ. ಕಳೆದ ವರ್ಷ ರಾಮನಗರ ಜಿಲ್ಲೆಯಲ್ಲಿ ಬಿಸಿಲ ತಾಪ 40 ಡಿಗ್ರಿ ಆಸುಪಾಸಿಗೆ ಬಂದು ತಲುಪಿತ್ತು. ಈ ಬಾರಿಯೂ ಆ ದಾಖಲೆ ಮುರಿಯುವ ಸಾಧ್ಯತೆ ಇದೆ. ನೀರಾವರಿ ತೋಟದಲ್ಲಿಯೂ ತೆಂಗು ಬಿಸಿಲ ಬೇಗೆಗೆ ಸಾಯುವ ಹಂತಕ್ಕೆ ತಲುಪಿದ್ದವು. ಇದರ ಪರಿಣಾಮ ಇನ್ನೂ ತೆಂಗು ಇಳುವರಿ ಮೇಲೆ ಇದ್ದು, ಉತ್ಪಾದನೆ ಮೇಲೆ ಪರಿಣಾಮ ಬೀರಿದೆ.

Vijayakaranataka Pg.04



Farmers in Kurugodu and Siruguppa taluks are among the worst affected | EXPRESS

West Asia crisis hits Ballari's fig farmers

KIRAN BALANNANAVAR
@ Kurugodu (Ballari district)

ESCALATING tensions in the Middle East have dealt a severe blow to fig (anjur) farmers in Ballari district, leaving growers and traders staring at heavy losses during what was expected to be a profitable season. Farmers in Kurugodu and Siruguppa taluks, which account for nearly 80% of Karnataka's fig cultivation, are among the worst affected.

Spread across more than 1,100 hectares, fig farming in the region had shown promising growth this year, with cultivators anticipating strong demand and better prices in international markets.

However, the sudden disruption of exports to key Middle Eastern countries such as Iran, Iraq, and Saudi Arabia has brought trade to a standstill. These nations have traditionally been major buyers of Ballari's figs, and the ongoing conflict has halted shipments entirely. "With exports completely stopped, we are left with no buyers for our produce. The fruits are highly perishable, and delays mean direct losses," a farmer from Kurugodu told *TNIE*. Many growers had invested heavily in irrigation, fertilisers, and labour, hoping to recover costs through export-driven sales. Usually, farmers get between Rs 8,000 and Rs 12,000 per quintal as yield value, and wet and dry figs fetch separate prices.

The crisis has also hit middlemen and traders who play a crucial role in marketing and distribution. With no export channels available, they are struggling to manage procurement and sales, further worsening the situation for farmers. Local markets are unable to absorb the sudden surplus, leading to a sharp fall in prices. Farmers now fear that a large portion of their yield may go to waste if alternative markets are not identified.

Agricultural experts have urged the government to step in with support measures, including price stabilisation, procurement assistance, and exploring new domestic or international markets. Without timely intervention, the livelihoods of hundreds of farming families in the region could be at risk.

Indian Express Pg.05

ಕೃಷಿ ಭೂಮಿಯ ಫಲವತ್ತತೆ ಕಾಪಾಡುವುದು ಅತಿಮುಖ್ಯ

ಸಾಧಕ ರೈತ ಸಮುದಾಯದೊಡನೆ ಸಂವಾದ

ಸಂ.ಕ.ಸಮಾಚಾರ, ರಾಮನಗರ

ಬಹುರಾಷ್ಟ್ರೀಯ ಕಂಪನಿಗಳ ರಾಸಾಯನಿಕ ಕ್ರಿಮಿನಾಶಕ ಗೊಬ್ಬರಗಳ ಬಳಕೆಯಿಂದ ಭೂಮಿ ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ, ಮತ್ತೆ ಮೊದಲಿನ ಸ್ಥಿತಿಗೆ ತರಬೇಕಾದರೆ ಅದೆಷ್ಟು ವರ್ಷಗಳ ಸಮಯ ಹಿಡಿಯುವುದೋ ಗೊತ್ತಿಲ್ಲ ಎಂದು ಜಾನಪದ ವಿದ್ವಾಂಸ ಹಾಗೂ ಟ್ರಸ್ಟ್ ಅಧ್ಯಕ್ಷ ಡಾ.ಎಂ. ಭೈರೇಗೌಡ ಆತಂಕ ವ್ಯಕ್ತಪಡಿಸಿದರು.

ಕೃಷ್ಣಾಪುರದೊಡ್ಡಿಯ ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಗಳು ಸಂಯುಕ್ತವಾಗಿ ತಾಲೂಕಿನ ಕೆರೆಮೇಗಳದೊಡ್ಡಿಯಲ್ಲಿರುವ ಮುದ್ದುಶ್ರೀ ದಿಬ್ಬದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ 'ಕನ್ನಡ ಸಾಹಿತ್ಯ ಮತ್ತು ಬೇಸಾಯದ ಬದುಕು' ಕುರಿತ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇನ್ನು ಕೇವಲ ಕೆಲವೇ ವರ್ಷಗಳಲ್ಲಿ ರೈತ ತಾನು ಬೆಳೆದ ಬೆಳೆಗೆ ತಾನೇ ಬೆಲೆ ನಿಗದಿಪಡಿಸುವ ಕಾಲ ಬರುತ್ತದೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಮಾತನಾಡಿದರು.

ಚಿಂತಕ ಡಾ.ಮಂಜುನಾಥ ಅದ್ದೆ ಅವರ ಸಮ್ಮುಖದಲ್ಲಿ ಸಾಧಕ ರೈತ ಸಮುದಾಯದೊಡನೆ ಸಂವಾದ ನಡೆಯಿತು. ಚನ್ನಪ್ಪ ಅಂಗಡಿ, ಡಾ. ನೂರ್ ಸಮದ್ ಅಬ್ಬಲಗೆರೆ, ಅನುಸೂಯಮ್ಮ, ಡಾ.ರವಿಕುಮಾರ್ ಬಾಗಿ ಪಾಲ್ಗೊಂಡಿದ್ದರು.



Sam. Kar. Pg.04